
## ಪದಬಂಧ



### ಎಡದಿಂದ ಬಲಕ್ಕೆ

1. ಎಲ್ಲಕ್ಕೂ ಸಮ್ಮತಿಸುತ್ತ ಇರುವ ಬದಲು ಕಣ್ಮರೆಯಾಗಿಬಿಡು 4
3. ಆತ್ಮನಿರ್ಭರಗೊಂಡ ಮನಸಿನಂತೆ ಆಗಸವೂ ಮೋಡರಹಿತ 3
4. ದಯಾಮಯನ ಮನದ ತುಂಬ ಮೃದುತ್ವ 3
6. ಕಪ್ಪು ಜಲ ಎಂಬಂತೆ ಸಾಗರ ದಾಟಿಸುವ ಶಿಕ್ಷೆ 4
7. ನ್ಯಾಯವಾದದ್ದನ್ನು ಕಂಡರಿಯಲು ಕಣ್ಣು ಬೇಕೇ ಬೇಕು 3
9. ಅಭ್ಯುದಯವನ್ನು ಕಳೆದುಕೊಳ್ಳುವ ಹೆದರಿಕೆ ಇಲ್ಲ 3
11. ಖಚಿತವೆಂಬುದನ್ನು ಕಂಡವರಾರು? ಅದಕ್ಕೇ ಈ ಒಪ್ಪಂದ 3
13. ತಪ್ಪೆಸಗಿ ಬಂದವನು ಈಗ ಖುಷಿಯಾಗಿದ್ದಾನೆ 4
15. ಮೃದ್ವಂಗಿ ಚಿಪ್ಪನ್ನು ಊದಿದ ಸದ್ದು ಮಂಗಳಕರವೇ? 4
17. ವರ್ಣನೆಗೆ ನಿಲುಕದಂಥ ಚಾಣಾಕ್ಷ ವ್ಯಾಪಾರಿ 3
18. ಹನುಮಂತನನ್ನು ಒಂದಂಶ ಕುಗ್ಗಿಸಿದರೂ ಅವನೇ 3
19. ರಥದ ನವೀಕರಣಕ್ಕೆ ಅಮೂಲ್ಯ ಮಣಿಯನ್ನು ಸುಮ್ಮನೇ ನೀಡಿದರೇ? 4

### ಮೇಲಿನಿಂದ ಕೆಳಕ್ಕೆ

1. ಆಭರಣಕ್ಕೆ ಸೂಕ್ತವಲ್ಲ ಹೊಳಪಿನ ಹಾಳೆ ರೂಪದ ಖನಿಜ 3
2. ಮೊಸರನ್ನೇ ಹೋಲುವಂತಿದೆ ಸ್ವಲ್ಪ ಹೆಚ್ಚು ಕಡಿಮೆ 3
3. ನಿದ್ರೆ ಮಾಡುವುದಕ್ಕೇ ಬಿಡದ ಕರುಣಾಹೀನ 3
5. ಆ ಗುಂಪಿನಲ್ಲಿ ಬಿಲ್ಲು ಹಿಡಿದವನೇ ಈಕೆಯ ಪತಿ 3
7. ಕುಡುಕನ ಜೊತೆ ಮಾತೆಂದರೇ ಆಕೆಗೆ ಗಡಗಡ 3
8. ಪರಮ ಪೂಜ್ಯರು ಶಿರ ನೇವರಿಸಿದಾಗ ಎಂಥ ರೋಮಾಂಚನ! 3
9. ಅಕ್ಷತೆಗೆಂದು ಇಟ್ಟ ಬಟ್ಟಲು ಕಿಂಚಿತ್ತೂ ಭಗ್ನವಾಗಿಲ್ಲ 3
10. ಆಶೆಯನ್ನು ಕೈಗೂಡಿಸಿಕೊಳ್ಳುವಲ್ಲಿ ಆಕೆ ಜಯಶೀಲೆಯಾಗಿದ್ದಾಳೆ 3
12. ವಜ್ರವನ್ನು ಅರಸಿ ಹೋದವರಿಗೆ ಸಿಕ್ಕಿದ್ದು ಸುಂದರ ತಾವರೆ 3
14. ಪಾಶ್ಚಿಮಾತ್ಯರನ್ನೆಲ್ಲ ಕರೆದೊಯ್ದ ದಿಕ್ಕು ಪಡುವಣ 3
15. ಶೋಕದಲ್ಲಿದ್ದವರ ನೆರವಿಗೆ ಬಂದವ ಪರಮೇಶ್ವರ 3
16. ದ್ರೋಹ ಮಾಡಿದವರನ್ನು ಸುಟ್ಟುಹಾಕುವುದೇ? 3

---

### 10—07—2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಮೋದಕ 3. ಕಲಹ 4. ವಲ್ಲಭ 6. ಅನುರಕ್ತ 7. ನಸುನಗು 9. ರಕ್ತಪಾತ 11. ಆವಿಷ್ಕಾರ 15. ಕಲ್ಮಶ 16. ಧಾವನ 17. ಯವನ

**ಮೇಲಿನಿಂದ ಕೆಳಕ್ಕೆ**

1. ಮೋಹನ 2. ಕವಡೆ 3. ಕರ್ತಾರ 5. ಭರಿಸು 6. ಅಬ್ಬರ 8. ಗುಡಾರ 10. ಪಾತಕ 12. ವಿಲೀನ 13. ಆಶಯ 14. ಸಂಧಾನ

ಪ್ರಶ್ನಾಂಕಣ

# ಲೂಸಿಯ ಮಗು: ಏನು ಮಹತ್ವ?

ಆಫ್ರಿಕಾ ಖಂಡದ, ಇಥಿಯೋಪಿಯಾ ದೇಶದ ಅಫಾರ್ ಪ್ರದೇಶದಲ್ಲಿ, 1974ರಲ್ಲಿ ಪ್ರಾಚೀನ ಮಾನವ ಅಸ್ಥಿಪಂಜರವೊಂದು ಪತ್ತೆಯಾಯಿತು. ವೈಜ್ಞಾನಿಕ ವಿಶ್ಲೇಷಣೆಯಿಂದ ಅದು ಮಹಿಳೆಯೊಬ್ಬಳ ಅಸ್ಥಿಪಂಜರ ಎಂಬುದೂ, ಅದು 3.2 ದಶಲಕ್ಷ ವರ್ಷ ಹಿಂದಿನದು ಎಂಬುದೂ ಪತ್ತೆಯಾಯಿತು. ಆಧುನಿಕ ಮಾನವರಾದ ನಮ್ಮೆಲ್ಲರ, ಎಂದರೆ ಹೋಮೊ ಸೇಪಿಯನ್ನರ, ಮೂಲ ಪ್ರಭೇದವಾದ ಅಸ್ಟ್ರಲೋಪಿಥೀಕಸ್ ಅಫರೆನ್ಸಿಸ್ (ಚಿತ್ರ 1, 2)ಗೆ ಸೇರಿದ್ದ, ಹಾಗಾಗಿ ನಮ್ಮೆಲ್ಲರ ಮೂಲ ಮಾತೆ ಎಂದೇ ವಿಖ್ಯಾತವಾದ ಆ ಮಹಿಳೆಗೆ ಲೂಸಿ ಎಂದೇ ನಾಮಕರಣ ಮಾಡಲಾಯಿತು.

ಯೋಗಾಯೋಗ ಏನೆಂದರೆ ಅದೇ ಅಫಾರ್ ಪ್ರದೇಶದಲ್ಲಿ, ಲೂಸಿಯ ಪಳೆಯುಳಿಕೆ ಲಭ್ಯವಾದ ಸ್ಥಳದಿಂದ ನಾಲ್ಕೇ ಕಿ.ಮೀ ದೂರದಲ್ಲಿ ಡಿಕಿಕಾ ಎಂಬ ಸ್ಥಳದಲ್ಲಿ ಮತ್ತೊಂದು ಅಸ್ಥಿಪಂಜರ ಪಳೆಯುಳಿಕೆ 2006ರಲ್ಲಿ ಪತ್ತೆಯಾಯಿತು. ಮರಳು ಶಿಲೆಯಲ್ಲಿ ಸಿಲುಕಿ ಪಳೆಯುಳಿಕೆಯಾಗಿದ್ದ ಆ ಅವಶೇಷ ಮೂರು ವರ್ಷ ವಯಸ್ಸಿನ ಹಸುಳೆಯದಾಗಿತ್ತು. ಬಹುಪಾಲು ಪರಿಪೂರ್ಣವಾಗಿಯೇ ಉಳಿದಿದ್ದ ಲೂಸಿಯದೇ ಕಾಲದ ಮತ್ತು ಲೂಸಿಯದೇ ಪ್ರಭೇದದ ಆ ಪಳೆಯುಳಿಕೆ ಹಾಗಾದ್ದರಿಂದಲೇ ಲೂಸಿಯ ಮಗು ಎಂದೇ ಪ್ರಸಿದ್ಧ. ಡಿಕಿಕಾ ಮಗು ಎಂದೂ ಕರೆಯಲಾಗುವ ಈ ಶಿಶುವಿಗೆ ಸೆಲಾಂ ಎಂದು (ಸ್ಥಳೀಯ ಇಥಿಯೋಪಿಯನ್ ಭಾಷೆಗಳಲ್ಲಿ ಸೆಲಾಂ ಎಂದರೆ ಶಾಂತಿ ಎಂದರ್ಥ) ನಾಮಕರಣವನ್ನೂ ಮಾಡಲಾಗಿದೆ. ವಿಶೇಷ ಏನೆಂದರೆ ಲೂಸಿಯ ಪಳೆಯುಳಿಕೆ ಇಪ್ಪತ್ತನೆಯ ಶತಮಾನದ ಅತ್ಯಂತ ಮಹತ್ವದ ಶೋಧ ಎಂದು ಪ್ರಸಿದ್ಧವಾಗಿರುವಂತೆಯೇ ಲೂಸಿಯ ಮಗುವಿನ ಪಳೆಯುಳಿಕೆ ಇಪ್ಪತ್ತೊಂದನೆಯ ಶತಮಾನದ ಅತ್ಯಂತ ಮಹತ್ವದ ಶೋಧ ಎಂದು ವಿಖ್ಯಾತವಾಗಿದೆ (1978ರಲ್ಲಿ ಲೆಟೋಲೀ ಸ್ಥಳದಲ್ಲಿ ಪತ್ತೆಯಾದ ಅಸ್ಟ್ರಲೋಪಿಥೀಕಸ್ ಅಫರೆನ್ಸಿಸ್ ಪ್ರಭೇದದ್ದೇ ಜನರ ಹೆಜ್ಜೆ ಗುರುತುಗಳ ಸರಣಿ ಚಿತ್ರ 3 ಕೂಡ ಇಂತಹದೇ ಮಹತ್ವದ ಮತ್ತೊಂದು ಶೋಧ)




ಲೂಸಿಯ ಮಗುವಿನ ಪಳೆಯುಳಿಕೆಯ ಮಹತ್ವಗಳು ಹಲವಾರು. ಇಂತಹ ಇನ್ನೊಂದು ಅವಶೇಷವೂ ಈವರೆಗೂ ಸಿಕ್ಕಿಲ್ಲ. ಹಾಗಾಗಿ ಅದರಂತಹ ಮಹತ್ವದ ಆಕರ ಇನ್ನಾವುದೂ ಇಲ್ಲ. ಅಸ್ಟ್ರಲೋಪಿಥೀಕಸ್ ಅಫರೆನ್ಸಿಸ್ ಪ್ರಭೇದದ ವಯಸ್ಕರ ಪಳೆಯುಳಿಕೆಗಳಿಗೆ ಹೋಲಿಸಿ ನಡೆಸಿರುವ ಅಧ್ಯಯನಗಳು ನಮ್ಮ ಮೂಲ ಮಾನವರನ್ನು ಕುರಿತ ಹಲವಾರು ಅದ್ಭುತ ಮಾಹಿತಿಗಳನ್ನು ಒದಗಿಸಿವೆ. ಉದಾಹರಣೆಗೆ ಆ ಜನರ ಮೆದುಳಿನ ಬೆಳವಣಿಗೆ, ದ್ವಿಪಾದಿತ್ವ ಮತ್ತಿತರ ಸಾಮರ್ಥ್ಯಗಳು... ಇತ್ಯಾದಿ. ಎಂಥ ವಿಸ್ಮಯ, ಅಲ್ಲವೇ?

■ ಎನ್. ವಾಸುದೇವ್